## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.2172/2025**

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಮಹಾಬಲೇಶ್ವರ ಎಸ್.ಎನ್. | ಸಿ.ಡಬ್ಲ್ಯು-1 |
| ತಂದೆಯ ಹೆಸರು | ಕನ್ಯಾನಾಯಕ್ ಎಸ್. | ಪಿ .ಡಬ್ಲ್ಯೂ-2 |
| ವಯಸ್ಸು | 60 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ನಿವೃತ್ತ ಪೊಲೀಸ್ ನಿರೀಕ್ಷಕರು | ದಿನಾಂಕಃ |
| ವಾಸಃ | ಶಿರಸಿ | 13.07.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು 30.08.2023 ರಿಂದ 31.05.2026 ರವರೆಗೆ ಸಾಗರ ಗ್ರಾಮಾಂತರ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿನಾಂಕ 10.01.2025 ರಂದು ರಾತ್ರಿ 08.00 ಗಂಟೆ ಸುಮಾರಿಗೆ ನಾನು ಅನ್ಯ ಕರ್ತವ್ಯದ ಮೇರೆಗೆ ಹೊರಗಡೆ ಇದ್ದೆ. ಆಗ ಚಾ.ಸಾ 5 ರವರು ಫೋನ್ ಮೂಲಕ ನನಗೆ ಶಡ್ತಿಕೆರೆ ಗ್ರಾಮದಲ್ಲಿ 3-4 ಜನ ಅಪರಿಚಿತರು ಕೆಎ-15/ಎ-7224 ರ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಗೋವುಗಳನ್ನು ಕಳ್ಳತನ ಮಾಡಲು ಬಂದಿದ್ದಾರೆ ಎಂದು ಮಾಹಿತಿ ಇದ್ದು, ಸದರಿಯವರನ್ನು ಮತ್ತು ವಾಹನವನ್ನು ಠಾಣೆಗೆ ಕರೆದುಕೊಂಡು ಬಂದಿರುವುದಾಗಿಯು, ಗ್ರಾಮಸ್ಥರ ಪರವಾಗಿ ಶಶಾಂಕ್, ಸುನೀಲ ಮತ್ತು ಅಕ್ಷಯ ಹಾಗೂ ಗ್ರಾಮಸ್ಥರು ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಕೃತ್ಯವು ಅತೀ ಸೂಕ್ಷ್ಮ ವಿಚಾರವಾಗಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಿರುವ ವಿಷಯವಾಗಿರುವ ಕಾರಣ ನಾನೇ ಸ್ವತಃ ಬಂದು ವಿಚಾರಣೆ ಮಾಡುತ್ತೇನೆ ಎಂದು ಚಾ.ಸಾ 5 ರವರಿಗೆ ತಿಳಿಸಿರುತ್ತೇನೆ.

**3.** ನಂತರ ರಾತ್ರಿ 08.00 ಗಂಟೆಗೆ ನಾನು ಠಾಣೆಗೆ ಬಂದು ನನ್ನ ಚೇಂಬರಿನಲ್ಲಿ ಕುಳಿತಿದ್ದೆ. ಆಗ ಆರೋಪಿತನು ಏಕಾಏಕಿ ನನ್ನ ಚೇಂಬರಿಗೆ ನುಗ್ಗಿ ನಮ್ಮ ಹುಡುಗರನ್ನು ಏಕೆ ಠಾಣೆಗೆ ಕರೆದುಕೊಂಡು ಬಂದಿದ್ದೀರಿ, ನಿಮಗೆ ಪೋಲಿಸರಿಗೆ ತಾಕತ್ತು ಇದ್ದರೆ ಡಾಕಾಯತಿ ಮತ್ತು ರಾಬರಿ ಮಾಡುವವರನ್ನು ಹಿಡಿಯಿರಿ ಎಂದು ಕೂಗಾಡುತ್ತಿದ್ದನು. ಆಗ ಆರೋಪಿತನನ್ನು ತಾಳ್ಮೆಯಿಂದ ಹೊರಗೆ ಕುಳಿತಿರಿ, ಮತ್ತೆ ಕರೆಯುತ್ತೇನೆ ಎಂದು ಹೇಳಿ ಹೊರಗೆ ಕಳುಹಿಸಿದೆ. ನಂತರ ಶಶಾಂಕ್, ಅಕ್ಷಯ ಮತ್ತು ಸುನೀಲ

ರವರನ್ನು ಚಾ.ಸಾ 3 ರವರ ಮೂಲಕ ನನ್ನ ಚೇಂಬರಿನ ಒಳಗೆ ಕರೆಯಿಸಿಕೊಂಡೆ. ಅವರನ್ನು ವಿಚಾರಣೆ ಮಾಡಿ, ಮುಂದಿನ ಕ್ರಮ ಕೈಗೊಳ್ಳುವಂತೆ ಠಾಣಾ ಅಧಿಕಾರಿಗಳಿಗೆ ತಿಳಿಸಿ ನನ್ನ ಚೇಂಬರಿನಿಂದ ಅವರನ್ನು ಹೊರಗೆ ಕಳುಹಿಸಿದೆ. ನಂತರ ಆರೋಪಿತನನ್ನು ಚೇಂಬರಿನ ಒಳಗೆ ಕಳುಹಿಸುವಂತೆ ಚಾ.ಸಾ 3 ರವರಿಗೆ ತಿಳಿಸಿದೆ. ಆಗ ಆರೋಪಿತನು ಚೇಂಬರಿನ ಒಳಗೆ ಬಂದಾಗ ಕುಳಿತುಕೊಳ್ಳುವಂತೆ ತಿಳಿಸುತ್ತಿದ್ದಂತೆ, ಆರೋಪಿತನು ಏಕಾಏಕಿ ನಮ್ಮ ಕಡೆಯ ಹುಡುಗರನ್ನು ಠಾಣೆಗೆ ಕರೆಯಿಸಿಕೊಂಡು ವಿನಃ ಕಾರಣ ತೊಂದರೆ ಕೊಡುತ್ತಿದ್ದೀರಿ, ದನ ಕದಿಯುವವರನ್ನು ಬಿಟ್ಟು ಡಾಕಾಯತಿ ಹಾಗೂ ರಾಬರಿ ಮಾಡುವವರನ್ನು ಹಿಡಿಯಲಾಗದ ಪೋಲಿಸರು ನೀವು ಎಂದು ನನ್ನ ಮೇಲೆ ಏರಿ ಬಂದು ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದನು. ನಂತರ ನಮ್ಮ ಠಾಣೆಯ ಪೋಲಿಸ್ ಸಿಬ್ಬಂದಿ ಆರೋಪಿತನಿಗೆ ತಿಳುವಳಿಕೆ ಹೇಳಿ ಹೊರಗೆ ಕಳುಹಿಸಿದರು. ಆದರೂ ಸಹ ಆರೋಪಿತನು ಪೋಲಿಸ್ ಇಲಾಖೆಯ ಬಗ್ಗೆ ಕೆಟ್ಟದಾಗಿ ಕೂಗಾಡುತ್ತಾ ಗ್ರಾಮಾಂತರ ಪೋಲಿಸ್ ಠಾಣೆಯ ಗೇಟಿನ ಮುಂಭಾಗದ ಹತ್ತಿರ ಅರೆನಗ್ನವಾಗಿ ಕುಳಿತು ಪೋಲಿಸರಿಗೆ ಧಿಕ್ಕಾರ ಎಂದು ಕೂಗಿರುತ್ತಾನೆ. ಆರೋಪಿತನು ಠಾಣಾ ಗೇಟಿನಲ್ಲಿ ಕುಳಿತಿದ್ದರಿಂದ ಠಾಣೆಗೆ ಬರುವ ಸಾರ್ವಜನಿಕರಿಗೂ ಸಹ ತೊಂದರೆ ಉಂಟಾಗಿರುತ್ತದೆ.

**4.** ಆರೋಪಿತನು ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದರಿಂದ ಅವನ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳುವಂತೆ ಸಾಗರ ಟೌನ್ ಪೋಲಿಸ್ ಠಾಣೆಗೆ ನನ್ನ ಗಣಕೀಕೃತ ದೂರನ್ನು ನೀಡಿರುತ್ತೇನೆ. ದೂರನ್ನು ಸ್ವೀರಿಸಿದ ನಂತರ ಸಾಗರ ಟೌನ್ ಪೋಲಿಸರು ದಿನಾಂಕ 11.01.2025 ರಂದು ಚಾ.ಸಾ 8 ಮತ್ತು 9 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿದರು. ನಂತರ ಪಂಚನಾಮೆ ಕಾಲಕ್ಕೆ ನಕ್ಷೆ ತಯಾರಿಸಿ, ಫೋಟೋ ತೆಗೆದರು. ಈ ಪ್ರಕರಣದ ತನಿಖಾ ಕಾಲಕ್ಕೆ ನಾನು ನಮ್ಮ ಠಾಣಾ ಗುನ್ನಾ ಸಂಖ್ಯೆ 11/2025 ರ ಕೇಸ್ ಡೈರಿ, ಪ್ರ.ವ. ವರದಿ, ದೂರು ಮತ್ತು ಇತರೆ ದಾಖಲೆಗಳ ಧೃಡೀಕೃತ ನಕಲುಗಳನ್ನು ನೀಡಿರುತ್ತೇನೆ.

**5.** ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು, ನಕ್ಷೆಯನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು, ಎರಡು ಫೋಟೋಗಳನ್ನು ನಿಪಿ–4 ಮತ್ತು ನಿಪಿ–5 ಎಂದು ಗುರುತಿಸಲಾಯಿತು. ಸಿ ಆರ್ 11/2025 ರ ಪ್ರ.ವ.ವರದಿ, ದೂರು, ದಿನಾಂಕ 10.01.2025 ರ ಕೇಸ್ ಡೈರಿಯನ್ನು ನಿಪಿ–6 ರಿಂದ ನಿಪಿ–8 ಎಂದು, ಅವುಗಳಲ್ಲಿನ

ಸಾಕ್ಷಿಯ ಸಹಿಗಳನ್ನು ನಿಪಿ–6(ಎ), ನಿಪಿ–7(ಎ) ಮತ್ತು ನಿಪಿ–8(ಎ) ಎಂದು ಗುರುತಿಸಲಾಯಿತು. ಆರೋಪಿತನ್ನು ನೋಡಿದರೆ ಗುರುತಿಸಬಲ್ಲೆ.

**ಆರೋಪಿತನು ಗೈರು ಹಾಜರಿದ್ದು, ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.